ಅಸಲು ದಾವಾ ಸಂಖ್ಯೆ 469/2017

**ಪಿ ಡಬ್ಲ್ಯೂ ನಂ ಃ 1**

**ದಿನಾಂಕ ಃ 11.02.2020 ರಂದು ಪ್ರಮಾಣ** ಮಾಡಿಸಲಾಯಿತು

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಎ.ಜಿ ಅವರಿಂದಃ

8. ದಾವಾ ಸ್ವತ್ತಿನಲ್ಲಿರುವ ಬಿ ಅನುಸೂಚಿ ಸ್ವತ್ತನ್ನು 1 ನೇ ಪ್ರತಿವಾದಿ 1993 ರಲ್ಲಿ ರುದ್ರೇಶಪ್ಪ ಎನ್ನುವವರಿಂದ 2 ಗುಂಟೆ ಜಮೀನನ್ನು ಖರೀದಿ ಮಾಡಿ , ಮನೆ ಕಟ್ಟಿರುತ್ತಾರೆಂದರೆ ಸರಿ ಹಾಗೂ ಸದರಿ ಸ್ವತ್ತನ್ನು 3 ಸಾವಿರ ರೂ. ಕೊಟ್ಟು ಖರೀದಿ ಮಾಡಿರುತ್ತಾರೆಂದರೆ ನನಗೆ ತಿಳಿದಿಲ್ಲ. ಸದರಿ ಬಿ ಅನುಸೂಚಿ ಸ್ವತ್ತಿನ್ನು 1 ನೇ ಪ್ರತಿವಾದಿ, 3 ನೇ ಪ್ರತಿವಾದಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆಂದರೆ ನನಗೆ ತಿಳಿದಿಲ್ಲ ಸದರಿ ಸ್ವತ್ತು 1 ನೇ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ 1 ನೇ ಪ್ರತಿವಾದಿಗಲ್ಲದೇ ಬೇರೆ ಯಾರಿಗೂ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ.

9. ಮೇಲಿನ ಹನಸವಾಡಿ ಗ್ರಾಮದಲ್ಲಿ 1 ನೇ ಪ್ರತಿವಾದಿಗೆ ಸೇರಿದ 2 ಅಂತಸ್ಥಿನ ಮನೆ ಇದ್ದು ಅದರಲ್ಲಿ 1 ನೇ ಪ್ರತಿವಾದಿಗೆ ಹಾಗೂ ಅವರ ಅಣ್ಣ ತುಂಗರಾಜಪ್ಪ ನವರಿಗೆ ಪಾಲಿದೆ ಎಂದರೆ ಸರಿಯಲ್ಲ. ತುಂಗರಾಜಪ್ಪನವರು ಮನೆಯ ಹಿರಿಯ ಸದಸ್ಯರು ಎಂದರೆ ಸರಿ . ಮೇಲಿನ ಹನಸವಾಡಿ ಗ್ರಾಮದಲ್ಲಿ ಮನೆ ನಂ. 189 ಇದೆ ಎಂದರೆ ನನಗೆ ತಿಳಿದಿಲ್ಲ. ಸದರಿ ಮನೆಯ ಖಾತೆ ತುಂಗರಾಜಪ್ಪನವರ ಹೆಸರಿನಲ್ಲಿದೆ ಎಂದರೆ ನನಗೆ ತಿಳಿದಿಲ್ಲ ಹಾಗೂ ಸದರಿ ಮನೆಯ ಮೇಲೆ ವಿಭಾಗಕ್ಕಾಗಿ 1 ನೇ ಪ್ರತಿವಾದಿ ತುಂಗರಾಜಪ್ಪನವರ ಮೇಲೆ ಶಿವಮೊಗ್ಗದ ಮಾನ್ಯ ಪ್ರಧಾನ ಸಿವಿಲ್ ನ್ಯಾ . ದಲ್ಲಿ ಅಸಲು ದಾವಾ ಸಂಖ್ಯೆ 818/2017 ದಾವೆ ಹೂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಹಾಗುಾ ಸದರಿ ದಾವೆ ವಿಚಾರಣೆ ಹಂತದಲ್ಲಿದೆ ಎಂದರೆ ನನಗೆ ತಿಳಿದಿಲ್ಲ. ಸದರಿ ಮನೆಯನ್ನು ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ತುಂಗರಾಜಪ್ಪನವರಿಗೆ ಸಹಾಯ ಮಾಡಲು ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

10. ಎ ಅನುಸೂಚಿಯಲ್ಲಿರುವ 1 ಹಾಗೂ 2 ನೇ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯ ಹೆಣ್ಣು ಮಕ್ಕಳಿಗೆ ಪಾಲಿದೆ ಎಂದರೆ ಸರಿಯಲ್ಲ. ತುಂಗರಾಜಪ್ಪನವರ ಚಿತಾವಣೆಯ ಮೇರೆಗೆ ಪ್ರತಿವಾದಿಯವರ ಮೇಲೆ ನಾನು ಈ ಸುಳ್ಳು ದಾವೆಯನ್ನು ಹೂಡಿದ್ದೇನೆಂದರೆ ಸರಿಯಲ್ಲ. ನಾನು ದಾವಾ ಎ ಅನುಸೂಚಿ ಸ್ವತ್ತನ್ನು ಪ್ರತಿವಾದಿಯವರ ಜೊತೆ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ನನ್ನ ಗಂಡ ತೀರಿಹೋದ ವರ್ಷವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 31.11.2014 ರಂದು ನನ್ನ ಗಂಡ ಮರಣ ಹೊಂದಿರುತ್ತಾರೆಂದರೆ ಸರಿ .

This is a True Copy of the Court Records Online. Authenticated @ districts.ecourtsindia.com/cnr/KA14030035142017/truecopy/order-3.pdf

www.ecourtsindia.com

11. ಮನೆಯ ವಹಿವಾಟು ಹಾಗೂ ಆಸ್ತಿ , ದಾವಾ ಸ್ವತ್ತಿನ ವಿಚಾರಗಳು ತಿಳಿದಿದ್ದರೂ ನಾನು ಸುಳ್ಳು ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ದಾವೆಯನ್ನು ಹೂಡಲು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಮೊದಲೇ ಮಾಹಿತಿ ಇತ್ತು ಎಂದರೆ ಸರಿ . ದಾವಾ ಸ್ವತ್ತಿನ ಮೇಲೆ ಇರುವ ಬ್ಯಾಂಕ್ ನ ಸಾಲವನ್ನು ತೀರುವಳಿ ಮಾಡಿದ ನಂತರ ಉಳಿದ ಹಣವನ್ನು ಹಂಚಿಕೊಳ್ಳಲು ಎಲ್ಲರೂ ಬಾಧ್ಯಸ್ಥರು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳನ್ನು ನನ್ನನ್ನು ಸೇರಿ 5 ನೇ 1 ಭಾಗಕ್ಕೆ (1/5) ಮಾತ್ರ ಹಕ್ಕಿರುತ್ತದೆಂದರೆ ಸರಿಯಲ್ಲ ಸದರಿ 5 ನೇ 1 (1/5) ಭಾಗಕ್ಕೆ ಮಾತ್ರ ನಾನು ಬಾಧ್ಯಸ್ಥಳು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಾನು 2015 ರಿಂದಲೂ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಹೂಡಿದ್ದರಿಂದ ಪ್ರತಿವಾದಿಗಳಿಗೆ ಆಸ್ತಿಯನ್ನು ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿ . ನಾನು ಹೂಡಿರುವ ದಾವಾ ಊರ್ಜಿತವಾದುದಲ್ಲ ಎಂದರೆ ಸರಿ .

<u>ಮರುವಿಚಾರಣೆಃ ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಇದೆ

5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಶಿವಮೊಗ್ಗ**

This is a True Copy of the Court Records Online. Authenticated @ districts.ecourtsindia.com/cnr/KA14030035142017/truecopy/order-3.pdf